† ಶ್ರೀ ಕೆ. ಎಚ್. ಪಾಟೀಲ್.—ಇದು ಸಾರ್ವಜನಿಕರಿಗೆ ಮನರಂಜನೆಯಾಗುವ ಕಾರ್ಯ. ಅರಣ್ಯದಲ್ಲಿ ನೋಡುವುದಕ್ಕೆ ಯಾರು ಬರುತ್ತಾರೆ ಅವರು ಇರುವುದಕ್ಕೆ ಅನುಕೂಲವಾಗುವಂತೆ ಪ್ರವಾಸಿ ಮಂದಿರ ಇಂಥ ವನ್ನು ಮಾಡುವ ಯೋಚನೆ ಇದೆ. ಒಂದೇ ದಿವಸದಲ್ಲಿ ಎಲ್ಲ ಆಗುವುದಿಲ್ಲ ಹೊಸ ಹೊಸದಾಗಿ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಅಭಯಾರಣ್ಯಕ್ಕೆ ಹೋಗಬೇಕಾದರೆ ಒಂದು ಸೇತುವೆ ಆಗಬೇಕಾಗಿದೆ. ಇಲ್ಲದೆ ಹೋದರೆ ಅದನ್ನು ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಸೇತುವೆಯನ್ನು ಜಾಗ್ರತೆ ಮಾಡಿಸುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅರಣ್ಯಕ್ಕೆ ಬರುವ ಸೇತುವೆಗೂ ಮಾನ್ಯ ಸದಸ್ಯರು ಹೇಳುವ ಸೇತುವೆಗೂ ವ್ಯತ್ಯಾಸವಿದೆ. ಅರಣ್ಯಕ್ಕೆ ಬರುವವರಿಗೆ ಜೀಪ್‌ಗಳಿಗೂ ಕಟ್ಟಿಗೆ ಹಾಕಿ ಸೇತುವೆ ಮಾಡುತ್ತೇವೆ. ಅರಣ್ಯಾಭಿವೃದ್ಧಿಗೆ ಏನೇನು ಬೇಕಾಗುತ್ತದೆ ಅಂಥ ಸೇತುವೆ ಕಟ್ಟಿ ಒಂದು ಬೆಂಬೂದರಿ ಸೇತುವೆ ಮಾಡೋಣ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಅಭಯಾರಣ್ಯವನ್ನು ಅಭಿವೃದ್ಧಿ ಮಾಡುವುದಕ್ಕೆ ನಮ್ಮ ಸರ್ಕಾರದ ಹಣವನ್ನು ಖರ್ಚು ಮಾಡುತ್ತಾರೆಯೇ ಅಥವಾ ಕೇಂದ್ರದಿಂದ ನೆರವನ್ನು ಕೇಳುತ್ತಾರೆಯೋ ?

ಶ್ರೀ ಕೆ. ಎಚ್. ಪಾಟೀಲ್.—ಇಂಥದಕ್ಕೆಲ್ಲ ಕೇಂದ್ರದ ನೆರವು ಸಿಕ್ಕುವುದಿಲ್ಲ, ದೊಡ್ಡ ದೊಡ್ಡ ಯೋಜನೆ ಮಾಡುವುದಾದರೆ ಕೇಂದ್ರದ ನೆರವು ಸಿಕ್ಕುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಜಾಗರ ಅಭಯಾರಣ್ಯದಲ್ಲಿ ಅಧಿಕಾರಿಗಳು ನಿರ್ಭಯರಾಗಿ ಕಾಡನ್ನು ಲೂಟಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮನರಂಜನೆ ಪಿಡಿಯ ಹೇಳಿದರಲ್ಲ ಯಾವ ಯಾವ ಪ್ರಾಣಿಗಳು ಅಲ್ಲಿವೆ ಎಂದು ಹೇಳುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅಧಿಕಾರಿಗಳು ನಿರ್ಭಯರಾಗಿ ಲೂಟಿ ಮಾಡುತ್ತಿದ್ದರೆ ಸರ್ಕಾರ ಇರಲಿಕ್ಕೆ ನಾಲಾಯಕ್ ಆಗುತ್ತದೆ. ಅಲ್ಲಿ ಕಳ್ಳ ಸಾಗಾಣಿಕೆ ಇರಬಹುದು. ಅವರಲ್ಲಿ ಅಧಿಕಾರೇತರರಿರಬಹುದು. ಕಳ್ಳ ಸಾಗಾಣಿಕೆಯನ್ನು ಬಿಂದ್ ಮಾಡಲು ಸರ್ಕಾರ ಯೋಜಿತವಾದ ಕ್ರಮ ಗಳನ್ನು ತೆಗೆದುಕೊಂಡಿದೆ. ಅಲ್ಲಿ ಯಾವ ಯಾವ ಪ್ರಾಣಿಗಳಿವೆ ಎನ್ನುವುದನ್ನು ಕಂಡು ಹಿಡಿದಿಲ್ಲ, ನೋಡಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ —ಈ ಅಭಯಾರಣ್ಯದಲ್ಲಿ ದೇವದಲ್ಲಿ ಇತರ ಜಾತಿ ಇಲ್ಲವೆ ಇರಬಹುದು, ಕಾಡು ಕೋಣಗಳು ಹೇರಳವಾಗಿರುತ್ತವೆ ಮತ್ತು ಕೆಮ್ಮಣ್ಣುಗುಂಡಿ ಭಾಗ ಈ ಅಭಯಾರಣ್ಯಕ್ಕೆ ಸಮೀಪವಾಗಿರುವುದರಿಂದ ಅಲ್ಲಿಗೆ ಹೋಗಿ ಬರುವುದಕ್ಕೆ ರಸ್ತೆ ಮಾಡಿಸುತ್ತಾರೆಯೇ ?

ಶ್ರೀ ಕೆ. ಎಚ್. ಪಾಟೀಲ್ —ಅಲ್ಲಿ ಕಾಡುಕೋಣಗಳಿವೆ. ಆದರೆ ದೇವರಲ್ಲಿ ಗಾತ್ರವಿಲ್ಲ ಇಲ್ಲವೆಂಥ ಕಾಡುಕೋಣಗಳು ಅಲ್ಲಿಲ್ಲ. ಕಾಡುಕೋಣಗಳಿಗೆ ರಸ್ತೆ ಬೇಕಾಗಿಲ್ಲ. ಅದನ್ನು ನೋಡುವುದಕ್ಕೆ ಹೋಗುವ ಜನರ ಸಲುವಾಗಿ ರಸ್ತೆ ಮಾಡೋಣ.

SHORT NOTICE QUESTIONS AND ANSWERS

ಸಂತಾನ ನಿರೋಧ ಶಸ್ತ್ರಕ್ರಿಯೆ ಬಗ್ಗೆ ಸುಳ್ಳು ದಾಖಲೆಗಳನ್ನು ನಿರ್ಮಿಸಿರುವುದು.

50. ಶ್ರೀ ಬಿ. ಜಿ. ಬಣಕಾರ್.—(ಹಿರೇಕೆರೂರು).

ಆರೋಗ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಧಾರವಾಡ ಜಿಲ್ಲೆಯ ಕೋಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋಡ ಮಂಚಾಯಿತಿ ಚೇರ್‌ಮನ್ ಆರ್. ಎಲ್. ಕಬ್ಬಕ್ಕೆಯವರು ಕುಟುಂಬ ಯೋಜನಾ ಸಂತಾನ ನಿರೋಧ ಶಸ್ತ್ರಕ್ರಿಯೆ ಮಾಡಿಸಿ ಕೊಳ್ಳದಿದ್ದರೂ ಕೂಡ ಅಂಥ ಹೆಸರನ್ನು ಬರೆದು ಅವರ ಸಹಿ ತೆಗೆದುಕೊಂಡು ಸ್ಥಳೀಯ ಅಧಿಕಾರಿಗಳು ಹಣ ಖರ್ಚು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಅದೇ ಪ್ರಕಾರ ಮಲ್ಲಪ್ಪ ಬಣಕಾರ್ ಸಾ॥ ಮಂಡ್ಡಿನ ಕೊಪ್ಪ ಇವರು ಕೂಡ ಶಸ್ತ್ರಕ್ರಿಯೆ ಮಾಡಿಸಿಕೊಳ್ಳದಿದ್ದರೂ ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದಾರೆಂದು ಸುಳ್ಳು ಲೆಕ್ಕ ಬರೆದು ಹಣ ಖರ್ಚು ಹಾಕಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಅದೇ ಪ್ರಕಾರ ಸೋಮಪ್ಪ ಮಲ್ಲಪ್ಪ ಕುರುಬರ ಸಾ॥ ಚಿಕೆರೂರ ಇವರು ಕ್ಯಾಶಸ್ತ್ರ ಕ್ರಿಯೆ ಮಾಡಿಸಿಕೊಳ್ಳದಿದ್ದರೂ ಸಹ ಆಪರ ಹೆಸರಿನಲ್ಲಿ ಖೊಟಾ ಹೆಬ್ಬಟ್ಟಿನ ಗುರುತಿನ ಸಹಿ ಬರೆದು ಅವರ ಹೆಸರಿನಲ್ಲಿ ಹಣ ಖರ್ಚು ಹಾಕಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

(ಈ) ಅದೇ ಪ್ರಕಾರ ರಾಜೇಸಾಬ ಓಲೇಕಾರ ಸಾ॥ ಮುಂಡಿನ ಕೊಪ್ಪ ಇವರು ಹಲವು ವರ್ಷಗಳ ಹಿಂದೆ ಕಾಗಿನಲ್ಲಿ ಆರೋಗ್ಯ ಕೇಂದ್ರದಲ್ಲಿ ಸಂತಾನ ನಿರೋಧ ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದರೂ ಸಹಿತ ಅವರ ಹೆಸರನ್ನು ಮತ್ತೊಮ್ಮೆ ಕೋಡ ಆರೋಗ್ಯ ಕೇಂದ್ರದಲ್ಲಿ ದಾಖಲೆ ಮಾಡಿ ಶಸ್ತ್ರಕ್ರಿ ಮಾಡಿಸಿಕೊಂಡಿದ್ದಾರೆಂದು ಸುಳ್ಳು ಬರೆದು ಅವರ ಹೆಸರಿನಲ್ಲಿ ಹಣ ಖರ್ಚು ಹಾಕಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

(ಉ) ಬಂದಿದ್ದರೆ ಸವಿಸ್ತಾರವಾಗಿ ವಿಚಾರಣೆಯನ್ನು ಮಾಡಲಾಗುವುದೇ ?

(ಊ) ಬಂದಿದ್ದರೆ, ಸದ್ಯ ಯಾವ ಕ್ರಮ ತೆಗೆದುಕೊಳ್ಳಲಾಗಿದೆ, ಯಾರ ಮೇಲೆ ತೆಗೆದುಕೊಳ್ಳಲಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).—

ಉತ್ತರ.—(ಅ) ಬಂದಿದೆ,

(ಆ) ಬಂದಿದೆ.

(ಇ) ಬಂದಿದೆ.

(ಈ) ಬಂದಿದೆ.

(ಉ) ಮಾಡಲಾಗುವುದು,

(ಊ) ಸದ್ಯದಲ್ಲಿ ಸದರಿ ವೈದ್ಯಾಧಿಕಾರಿಗಳನ್ನು ಸಸ್ಪೆಂಡ್ ಮಾಡುವ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಬಿ. ಜಿ. ಬಣಕಾರ್.—ಪ್ರಿಲಿಮಿನರಿ ಎನ್‌ಕ್ವೈರಿ ಮಾಡಿಸಿದ್ದಾರೆಯೇ ? ಆಗಿದ್ದರೆ ಪ್ರೈಮಾ ಫೇಸಿ ಕೇಸಿದೆಯೇ ? ಹಾಗಿದ್ದರೆ ಡೀಟೇಲ್ಡ್ ಎನ್‌ಕ್ವೈರಿ ಮಾಡಿಸುತ್ತಾರೆಯೇ ?

† ಶ್ರೀ ಎಚ್. ಸಿದ್ದವೀರಪ್ಪ —ಪ್ರಿಲಿಮಿನರಿ ಎನ್‌ಕ್ವೈರಿ ಮಾಡಿಸಿ, ಪ್ರೈಮಫೇಸಿ ಕೇಸ್ ರುಜುವಾತಾದ ಮೇಲೆ ಆ ಅಧಿಕಾರಿಯನ್ನು ಸಸ್‌ಪೆನ್‌ಷನ್‌ನಲ್ಲಿಡಲಾಗಿದೆ. ಪ್ರಿಲಿಮಿನರಿ ಎನ್‌ಕ್ವೈರಿಯಲ್ಲಿ ಬಹಳ ಗುರುತರವಾದ ಕೆಲವು ಅಪಾದನೆಗಳು ಹೊರಪಟ್ಟಿವೆ. ಮಾರ್ಚ್ ಏಪ್ರಿಲ್ ೧೯೭೩ರಲ್ಲಿ ವ್ಯಾಸೆಕ್ಟಮಿ ಆಪರೇಷನ್ ಕ್ಯಾಂಪ್‌ನಲ್ಲಿ ಮೂರು ನಾಲ್ಕು ಜನರಿಗೆ ಆಪರೇಷನ್ ಮಾಡದೆ. ಆಪರೇಷನ್ ಆಗಿದೆ ಎಂದು ಸರ್ಟಿಫಿಕೇಟು ಕೊಟ್ಟು ಅವರಿಂದ ಕೆಲವು ದುಡ್ಡು ತೆಗೆದುಕೊಂಡಿದ್ದಾರೆ. ಈ ಬಗ್ಗೆ ಒಂದು ದೂರು ಬಂದಿತ್ತು. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಿಂದ ಅದನ್ನು ತನಿಖೆ ಮಾಡಿಸಿದ್ದೇವೆ. ವಿಚಾರಣೆ ನಡೆದು ತನಿಖೆ ಆಗಿ ಪ್ರಿಲಿಮಿನರಿ ರಿಪೋರ್ಟ್ ಬಂದಿದೆ. ಇದನ್ನು ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸುತ್ತೇವೆ. ಅವರು ಸರಿಯಾದ ತನಿಖೆ ಮಾಡಿ ಅವರಿಂದ ಅಂತಿಮ ವರದಿ ಬಂದ ಮೇಲೆ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

12-30 P.M.

ಶ್ರೀ ಬಿ.ಜಿ. ಬಣಕಾರ್ —ಧಾರವಾಡ ಜಿಲ್ಲೆಯಲ್ಲಿ ಇಂತಹ ಅನೇಕ ಸುಳ್ಳು ದಾಖಲೆಗಳನ್ನು ನಿರ್ಮಿಸಿ ಇಲ್ಲಿನ ಅಧಿಕಾರಿಗಳು ಹಣವನ್ನು ಪಡೆಯುತ್ತಿರುವುದರಿಂದ ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುವುದು ಇಂತಹ ಆಸ್ಪತ್ರೆಗಳಲ್ಲಿ ಯಾರು ಯಾರು ಹೋದು ಇಂತಹ ಚಿಕಿತ್ಸೆಗಳನ್ನು ಪಡೆದರು ಎನ್ನುವ ಒಂದು ಯಾದಿಯನ್ನು ಸಾರ್ವಜನಿಕರು ನೋಡಲು ಇಡುವಂತೆ ಮಾಡುತ್ತೀರಾ? ಹಾಗೆ ಮಾಡಿದರೆ ಇವರಲ್ಲಿ ನಿಜ ವಿದೆಯೇ ಇಲ್ಲವೇ ಎನ್ನುವುದನ್ನು ತಿಳಿದು ಸಾರ್ವಜನಿಕರು ಸರಕಾರಕ್ಕೆ ಬಳಸಲು ಅನುಕೂಲವಾಗುತ್ತದೆ ? ಇದನ್ನು ಯೋಚನೆ ಮಾಡುತ್ತಾರೆಯೇ?

ಶ್ರೀ ಹೆಚ್. ಸಿದ್ದವೀರಪ್ಪ.—ಈ ರೀತಿಯಾಗಿ ಪಬ್ಲಿಕ್ ಎನ್‌ಕ್ವೈರಿ ಮಾಡಲಿಕ್ಕಾಗುವುದಿಲ್ಲ. ಇದರಲ್ಲಿ ದುರುಪಯೋಗವಾಗಿದೆ ಎಂದು ನಿರ್ದಿಷ್ಟವಾಗಿ ದೂರುಗಳೇನಾದರೂ ಬಂದರೆ ಆಗ ಸರಕಾರದವರು ಏನಾದರೂ ಇದರೆ ಬಗ್ಗೆ ವಿಚಾರ ಮಾಡಬಹುದು.

ಶ್ರೀ ಬಿ. ಜೆ ಬಣಕಾರ —ಯಾರು ಇದರಲ್ಲಿ ಜವಾಬುದಾರರು ಎನ್ನುವುದನ್ನು ತಿಳಿಯಬೇಕಾದರೆ ಸರಕಾರದ ಆಪ್ತರೆಗಳಲ್ಲಿರುವವರು ಅಲ್ಲಿಗೆ ಯಾರು ಯಾರು ಬಂದಿದ್ದರು ಎನ್ನುವ ವಿವರಗಳನ್ನೊಳಗೊಂಡ ಒಂದು ಟಿಪ್ಪಣಿಯನ್ನು ಇಟ್ಟರೆ ಅದನ್ನು ಅಲ್ಲಿಗೆ ಬರುವ ಸಾರ್ವಜನಿಕರು ನೋಡಿ ಅದರಲ್ಲಿ ದುರುಪಯೋಗವಾಗಿದೆ ಮತ್ತು ತಿಳಿದುಬಂದರೆ ಮಾತ್ರ ನಿರ್ದಿಷ್ಟವಾಗಿ ಸರಕಾರಕ್ಕೆ ದೂರನ್ನು ಬರೆದು ತಿಳಿಸಲು ಅನುಕೂಲವಾಗುತ್ತೆ. ಇದಕ್ಕಾಗಿ ಯಾದಿಯನ್ನು ಇಡಲು ಪ್ರಯತ್ನ ಮಾಡುತ್ತೀರಾ?

ಶ್ರೀಟಿ. ಸಿದ್ಧವೀರಪ್ಪ.—ಇದನ್ನು ವಿಚಾರಮಾಡಬೇಕಾಗುತ್ತದೆ. ಈಗಲೇ ಇದರ ಬಗ್ಗೆ ಖಂಡಿತ ಅಥವಾ ಇಷ್ಟೆಂದು ಹೇಳಲಾಗುವುದಿಲ್ಲ. ಸಾನಾನಗಲೇ ಹೇಳಿದಂತೆ ಇದರಲ್ಲಿ ನಿರ್ದಿಷ್ಟವಾದ ದೂರುಗಳು ಬಂದರೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಅದನ್ನು ಬಿಟ್ಟು ಯಾರು ಯಾರು ಬಂದು ಇಲ್ಲಿ ಚಿಕಿತ್ಸೆಮಾಡಿಕೊಂಡರು ಎಂ ಎಲ್ಲರನ್ನೂ ಹುಡುಕಿಕೊಂಡು ಹೋಗುವುದು ಸಾಧ್ಯವಲ್ಲದ ಕೆಲಸ. ಇದರ ಬಗ್ಗೆ ಸೂಕ್ತವಾದ ಯಾವುದಾದರೂ ತೆಗೆದುಕೊಳ್ಳಬಹುದೋ ಅದನ್ನು ವಿಚಾರ ಮಾಡಬೇಕು.

ಶ್ರೀ ಬಿ. ಜೆ. ಬಣಕಾರ. —ಇಲ್ಲಿ ಯಾದಿಯನ್ನು ಇಡಲು ಹೇಳಿದರೆ ಆಗ ಇದರಲ್ಲಿರುವ ಸತ್ಯಾಂಶ ಸಾರ್ವಜನಿಕರಿಗೆ ತಿಳಿಯಲು ಸಹಾಯವಾಗುತ್ತದೆ. ಸಾರ್ವಜನಿಕರು ಯಾದಿಯನ್ನು ನೋಡಿ ಅದರಲ್ಲಿ ದುರುಪಯೋಗವಾಗಿದ್ದರೆ ಸರಕಾರಕ್ಕೆ ತಿಳಿಸಬಹುದು.

ಶ್ರೀ ಪೆಚ್.ಸಿದ್ಧವೀರಪ್ಪ —ಈ ತರಹ ರೊಮಿಂಗ್ ಎನ್‌ಕ್ವೈರಿ ಮಾಡುವುದಕ್ಕಾಗುವುದಿಲ್ಲ.

It involves so many issues; whether it is a public document is one ting. Further, it is a confidential thing. I must first get satisfied whether it is a public document:

ಮ್ಯಾನಿಪ್ಯುಲೇಷನ್ ಆಪರೇಷನ್ ಮಾಡಿಸಿಕೊಳ್ಳುವವರು ಅವರು ಮಾತಿಸಿಕೊಂಡಿದ್ದೇವೆಂದು ಯಾರಿಗೂ ಹೇಳಲು ಇಷ್ಟಪಡುವುದಿಲ್ಲ. ಕೆಲವರು ಆಪರೇಷನ್ ಮಾಡದೆ ದುಡ್ಡು ಪಡೆದಿದ್ದಾರೆ ಎಂದು ಇಲ್ಲಿ ಹೇಳುತ್ತಾರೆ. ಇದನ್ನು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಕೇಳುವಂತಹ ವಿಚಾರಗಳ ಬಗ್ಗೆ ನನಗೆ ಈಗಲೇ ಉತ್ತರ ಹೇಳುವುದಕ್ಕಾಗುವುದಿಲ್ಲ.

MADAM SPEAKER.—Now Questions are over.

QUESTION FOR ANSWERS ON THE DAY (BUT NOT TAKEN UP)

AMOUNT PAID BY KARNATAKA LAND DEVELOPMENT BANK FOR PURCHASE OF PUMPSETS

357. SRI M.M. SAJJAN (Muddebihal).—

Will the Minister for Co-operation be pleased to state.

(*a*) the total number of applications granted by the Karnataka State Land Development Bank to Muddebihal Primary Land Development Bank for purchase of pumpsets (yearwise from 1971-72 to 1973-74);

(*b*) the total amount paid by the Karnataka State Land Development Bank to Muddebihal Primary Land Development Bank for purchase of pumpsets (yearwise from 1971-72 to 1973-74);

(*c*) the total amount paid by Muddebihal Primary Land Development Bank for purchase of pumpsets (yearwise from 1971-72 to 1973-74)?